ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು

ಸಿಸಿ 1826/2022

| | | |
|---|---|---|
| ಸಾಕ್ಷಿದಾರರ ಹೆಸರು | - ಡಾಃ ಕಾವ್ಯಶ್ರೀ | ಚಾಸಾ-8 |
| ಗಂಡನ ಹೆಸರು | - ಪ್ರಸನ್ನ | ಫ್ರಾಸಾ-1 |
| ವಯಸ್ಸು | - 34 ವರ್ಷ | |
| ಉದ್ಯೋಗ | - ವೈದ್ಯರು, ಮದ್ದೂರು ಸರ್ಕಾರಿ ಆಸ್ಪತ್ರೆ | |
| ವಾಸಸ್ಥಳ | - ಮದ್ದೂರು | |

ದಿನಾಂಕಃ- 05-12-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎಪಿಪಿ ರವರಿಂದಃ-**

ನಾನು 2019 ಮೇ ರಿಂದ ಇಲ್ಲಿಯವರೊ ಮದ್ದೂರು ಸರ್ಕಾರಿ ಆಸ್ಪತ್ರೆಯಲ್ಲಿ ಹಿರಿಯ ವೈದ್ಯಾಧಿಕಾರಿಯಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೆನೆ.

ದಿನಾಂಕ 23-02-2022 ರಂದು ಸಂಜೆ 5 ಗಂಟೆ 10 ನಿಮಿಷದಲ್ಲಿ ಚಾಸಾ-2 ರವರು ಹಲ್ಲೆ / ಹೊಡೆದಾಟದ ಹಿನ್ನಲೆಯಲ್ಲಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿರುತ್ತಾರೆ. ನಾನು ಚಾಸಾ-2 ರವರನ್ನು ಪರೀಕ್ಷಿಸಿದಾಗ ಈ ಕೆಳಕಂಡಂತೆ ಗಾಯಗಳು ಕಂಡು ಬಂದಿರುತ್ತದೆ.

1. ಚಾಸಾ-2 ರವರಿಗೆ ಬಲ ಮಂಡಿಯಲ್ಲಿ ನೋವಿನ ಅನುಭವ ಇರುತ್ತದೆ ಬೇರೆ ಯಾವುದೇ ಹೊರ ಗಾಯಗಳು ಇರುವುದಿಲ್ಲ .

ನನ್ನ ಅಭಿಪ್ರಾಯದ ಪ್ರಕಾರ ನಮೂದು ಮಾಡಿರುವ ಗಾಯ ಸಾಮಾನ್ಯ ಸ್ವರೂಪದ ಗಾಯ ಆಗಿರುತ್ತದೆ. ನಾನು ಈ ಕುರಿತು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೆನೆ. ಸಾಕ್ಷಿಯು ಚಾಸಾ-2 ರವರ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

ನಂತರ ಹೆಚ್ಚಿನ ಚಿಕಿತ್ಸೆಗಾಗಿ ತಜ್ಞರ ವೈದ್ಯರಿಂದ ತಪಾಸಣೆ ಮಾಡುವಂತೆ ಸೂಚನೆ ನೀಡಿರುತ್ತೆವೆ.

**ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀಮತಿ ವೈ ಸಿ ಬಿ ವಕೀಲರಿಂದಃ-**

ಹಲವಾರು ಕಾರಣಗಳಿಗೆ ವ್ಯಕ್ತಿಗೆ ನೋವು ಬರುವ ಸಾಧ್ಯತೆ ಇದೆ ಎಂದರೆ ಸರಿ . ಆ ದಿನ ನಾನು ಚಾಸಾ 2 ರವರಿಗೆ ಯಾವುದೇ ಚಿಕಿತ್ತೆ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ 2 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ
ನಿಪಿ-1 ರಲ್ಲಿ ಗಲಾಟೆಯು ಯಾವಾಗ ಆಗಿರುತ್ತದೆ ಎಂದು ಬರೆದಿಲ್ಲ. ಸಾಮಾನ್ಯವಾಗಿ ಕಲ್ಲು ರಸ್ತೆಯಲ್ಲಿ ಒಬ್ಬ ವ್ಯಕ್ತಿ ಎಡವಿ ಜಾರಿ ಬಿದ್ದರೆ ನಿಪಿ-6 ರಲ್ಲಿರುವ ಗಾಯ ಆಗುವ ಸಾಧ್ಯತೆ ಇದೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)
ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಎರಡನೇ ಅಪರ ಸಿವಿಲ್ ಮತ್ತು ಜೆಎಂಎಫ್,ಸಿ,
ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ